# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 2836 |
| ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀ ಯು.ಬಿ ವೆಂಕಟೇಶ್ (ನಾಮ ನಿರ್ದೇಶನ ಹೊಂದಿದವರು) |
| ಉತ್ತರಿಸುವವರು | : | ಮಾನ್ಯ ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ ಸಾರ್ವಜನಿಕ ವಲಯ ಉದ್ಯಮಗಳ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 29.03.2022 |

| ಕ್ರ.ಸಂ | ಪ್ರಶ್ನೆ | ಉತ್ತರ | ANSWER |
|---|---|---|---|
| ಅ) | ರಾಜ್ಯದಲ್ಲಿ ಕಳೆದ ಎರಡು ವರ್ಷಗಳಲ್ಲಿ ಮುಚ್ಚಲಾಗಿರುವ ಸಣ್ಣ ಕೈಗಾರಿಕೆಗಳ ಸಂಖ್ಯೆ ಎಷ್ಟು; ಕೈಗಾರಿಕೆಗಳನ್ನು ಮುಚ್ಚಲು ಕಾರಣಗಳೇನು; ಕೈಗಾರಿಕೆಗಳ ಪುನ;ಶ್ಚೇತನಕ್ಕೆ ಸರ್ಕಾರವು ರೂಪಿಸಿರುವ ಕಾರ್ಯಕ್ರಮಗಳೇನು; | ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ ಸುರಕ್ಷತೆ ಮತ್ತು ಸೌಸ್ಥ್ಯ ಇಲಾಖೆಯ ಕಾರ್ಯವ್ಯಾಪ್ತಿಯಲ್ಲಿ ಕೈಗಾರಿಕೆಗಳನ್ನು ಸಣ್ಣ ಕೈಗಾರಿಕೆಗಳು, ಕೈಗಾರಿಕೆಗಳೆಂದು ವಿಂಗಡಿಸಿರುವುದಿಲ್ಲ.<br><br>ಕಾರ್ಖಾನೆಗಳ ಕಾಯ್ದೆ 1948 ರಡಿಯಲ್ಲಿ ನೋಂದಾವಣೆಯಾದ ಕಾರ್ಖಾನೆಗಳ ಪೈಕಿ ಕಳೆದ ಎರಡು ವರ್ಷಗಳ ಅವಧಿಯಲ್ಲಿ ಮುಚ್ಚಲ್ಪಟ್ಟಿರುವ ಕಾರ್ಖಾನೆಗಳ ಸಂಖ್ಯೆಯನ್ನು ಈ ಮುಂದಿನಂತೆ ಒದಗಿಸಲಾಗಿದೆ.<br><br>ವರ್ಷ / ಮುಚ್ಚಲ್ಪಟ್ಟಿರುವ ಕಾರ್ಖಾನೆಗಳ ಸಂಖ್ಯೆ<br>2020 / 562<br>2021 / 192<br>ಒಟ್ಟು / 754<br><br>ಸಣ್ಣ ಕಾರ್ಖಾನೆಗಳು ವಿವಿಧ ಕಾರಣಗಳಿಂದ ಮುಚ್ಚಲ್ಪಡುತ್ತವೆ. ಅವು ಉತ್ಪನ್ನದ ಬೇಡಿಕೆ, ಕಚ್ಚಾಮಾಲಿನ ಕೊರತೆ, ಹಳೆಯ ತಂತ್ರಜ್ಞಾನ, ದುಡಿಮೆ ಬಂಡವಾಳದ ಕೊರತೆ, ಕಾರ್ಮಿಕರ ಸಮಸ್ಯೆ, ಸರ್ಕಾರದ ನೀತಿ, ಅನಗತ್ಯ ಬಂಡವಾಳ ಹೂಡಿಕೆ, ಆಡಳಿತ ಮಂಡಳಿಯ ಆಂತರಿಕ ಸಮಸ್ಯೆ ಇತ್ಯಾದ ಆಗಿರಬಹುದು. ಇಂತಹ ಕಾರ್ಖಾನೆಗಳು ಮುಚ್ಚಲ್ಪಟ್ಟ ನಂತರ ಆ ಆಡಳಿತ ಮಂಡಳಿಗಳೇ / ಮಾಲೀಕರೆ/ ಪಾಲುದಾರರೇ ಸಮಸ್ಯೆಗಳಿಗೆ ಪರಿಹಾರ ಕಂಡುಕೊಂಡು ಕಾರ್ಖಾನೆ ಕಾರ್ಯಾಚರಣೆ ಪ್ರಾರಂಭಿಸಬೇಕು. ಸರ್ಕಾರವು ಇದಕ್ಕೆ ಯಾವುದೇ ಕ್ರಮಕೈಗೊಳ್ಳುವುದಿಲ್ಲ. | There is no classification of small industries under the Department of Factories, Boilers, Industrial Safety and Health.<br><br>Among the factories registered under the Factories Act 1948, the details of number of factories closed during the last 2 years are as follows;<br><br>YEAR / NO.OF FACTORIES CLOSED<br>2020 / 562<br>2021 / 192<br>TOTAL / 754<br><br>Small scale industries close due to various reasons. They may be due to demand of product, ram material shortage, obsolete technology, shortage of working capital, labour problem, Government policies, investment on unwanted assets, internal problems of administrative body, etc., These industries have to find out ways to start their production after their closure. State Government will not take action in opening the closed units.<br><br>Reserve Bank of India has formulated the following programs for rehabilitation of sick industries. |

ಕೈಗಾರಿಕೆಗಳ ಪುನಃಶ್ಚೇತನಕ್ಕೆ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಈ ಕೆಳಗಿನ ಕಾರ್ಯಕ್ರಮಗಳನ್ನು ರೂಪಿಸಿರುತ್ತದೆ.

ಸಾಲ ಪಡೆದು ಒತ್ತಡದಲ್ಲಿರುವ ರೋಗಗ್ರಸ್ಥ ಸಣ್ಣ ಕೈಗಾರಿಕೆಗಳ ಪುನ:ಶ್ಚೇತನಕ್ಕಾಗಿ ಆರ್‌ಬಿಐ ರವರು ಸಂಖ್ಯೆ ಆರ್‌ಬಿಐ/2018-19/203 ದಿನಾಂಕ 7/6/2019 ರಂದು ಬ್ಯಾಂಕುಗಳಿಗೆ ಸುತ್ತೋಲೆ ನೀಡಿದ್ದು ಅದರಂತೆ ಬ್ಯಾಂಕುಗಳು ಕಾರ್ಯ ನಿರ್ವಹಿಸುತ್ತಿವೆ.

ರೋಗಗ್ರಸ್ಥ ಘಟಕಗಳ ಪುನ:ಶ್ಚೇತನಕ್ಕಾಗಿ ಬ್ಯಾಂಕುಗಳು ಕೆಳಕಂಡ ಸವಲತ್ತುಗಳನ್ನು ನೀಡುತ್ತಿವೆ.

1. ಪಡೆದ ಸಾಲದ ಕಂತುಗಳನ್ನು ರೀ ಷೆಡ್ಯೂಲ್ ಮಾಡುವುದು,
2. ಅಗತ್ಯಕ್ಕೆ ಬೇಕಾಗಿರುವ ಹೆಚ್ಚುವರಿ ದುಡಿಮೆ ಬಂಡವಾಳ/ಅವಧಿ ಸಾಲ ನೀಡುವುದು

ಕೋವಿಡ್-19 ರಿಂದ ಆರ್ಥಿಕ ತೊಂದರೆಯಾಗಿ ಸಂಕಷ್ಟದಲ್ಲಿರುವ ಸಣ್ಣ ಉದ್ಯಮಗಳಿಗೆ ಪ್ರೋತ್ಸಾಹ ನೀಡಲು ರಾಜ್ಯ ಸರ್ಕಾರದಿಂದ ಈ ಕೆಳಗಿನ ಯೋಜನೆ ಜಾರಿಗೊಳಿಸಲಾಗಿರುತ್ತದೆ:

1. ಇಂಧನ ಇಲಾಖೆಯು ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ಏಪ್ರಿಲ್ ಮತ್ತು ಮೇ 2020 ತಿಂಗಳ ಬೇಡಿಕೆ ಶುಲ್ಕ ಮತ್ತು ಸ್ಥಿರ ಶುಲ್ಕವನ್ನು ಮನ್ನಾ ಮಾಡಿರುತ್ತದೆ.

2. ಇಂಧನ ಇಲಾಖೆಯು ವಿದ್ಯುತ್ ಬಿಲ್‌ನ್ನು ಪ್ರಾಮಾಣಿಕವಾಗಿ ನಿಗದಿತ ಅವಧಿಯೊಳಗೆ ಪಾವತಿಸುವ ಕೈಗಾರಿಕೆಗಳಿಗೆ ರಿಯಾಯಿತಿಯನ್ನು ನೀಡಿರುತ್ತದೆ. ಹೆಚ್‌ಟಿ ಗರಿಷ್ಠ ಮಿತಿ ರೂ.1 ಲಕ್ಷ, ಎಲ್‌ಟಿ ಗರಿಷ್ಠ ಮಿತಿ ರೂ.10,000/-

| | |
|---|---|
| 1 ರಿಂದ 5 ದಿನದೊಳಗೆ ಪಾವತಿಸಿದಲ್ಲಿ | ಶೇ 1% ರಿಯಾಯಿತಿ |
| 6 ರಿಂದ 15 ದಿನದೊಳಗೆ ಪಾವತಿಸಿದಲ್ಲಿ | ಶೇ 0.5% ರಿಯಾಯಿತಿ |
| 15 ರಿಂದ 30 ದಿನದೊಳಗೆ ಪಾವತಿಸಿದಲ್ಲಿ | ಯಾವುದೇ ರಿಯಾಯಿತಿ ಇರುವುದಿಲ್ಲ |

For rehabilitation of sick small scale industries that have availed loan Reserve Bank of India has issued circular vide No. RBI/2018-19/203 dated: 7/6/2019 and the banks are acting accordingly.

Banks are offering the following packages for rehabilitation of stressed sick industries.

1. Rescheduling of loan installments.
2. Sanction of additional working capital/ term loan that is required.

Government of Karnataka has taken following steps to support micro, small and medium industries during the corona pandemic:

1. Energy Department has waived off fixed charges and demand charges of MSMEs for the month of April and May 2020.

2. Energy Department has offered concessions to the MSMEs who pay the power within scheduled period. For HT-Maximum limit is Rs.1.00 lakh, For LT-Maximum limit is Rs.10,000

| | |
|---|---|
| if paid between 1 to 5 days | 1% rebate |
| if paid between 6 to 15 days | 0.5% rebate |
| if paid between 15 to 30 days | No rebate |

3. Karnataka Industrial Areas Development board has deferred the payment of March, April and may 2020 month installments for 3 months to be paid by the entrepreneurs who have been allotted plot by them. No interest will be levied on the dues payable.

<table>
<tr>
<td></td>
<td></td>
<td>3. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಉದ್ಯಮಶೀಲರು ತಮಗೆ ಹಂಚಿಕೆಯಾದ ನಿವೇಶನಗಳ ಕಂತು ಮಾರ್ಚ್, ಏಪ್ರಿಲ್, ಮೇ ಮತ್ತು ಜೂನ್ 2020 ತಿಂಗಳಲ್ಲಿ ಪಾವತಿಸದಿದ್ದಲ್ಲಿ ಆ ಪಾವತಿಯನ್ನು ಕ್ರಮವಾಗಿ 3 ತಿಂಗಳು ಮುಂದೂಡಲಾಗಿದೆ ಮತ್ತು ಈ ಮೊತ್ತಕ್ಕೆ ಯಾವುದೇ ಬಡ್ಡಿಯನ್ನು ವಿಧಿಸುವುದಿಲ್ಲ.<br><br>4. ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮವು ಉದ್ಯಮಶೀಲರು ತಮಗೆ ಹಂಚಿಕೆಯಾದ ನಿವೇಶನಗಳ ಕಂತು, ಮಳಿಗೆಗಳ ಬಾಡಿಗೆ ಮತ್ತು ನೀರಿನ ಶುಲ್ಕಗಳ ಏಪ್ರಿಲ್, ಮೇ ಮತ್ತು ಜೂನ್ 2020 ತಿಂಗಳುಗಳ ಕಂತನ್ನು ಈ ಕೆಳಗಿನಂತೆ ಪಾವತಿಸಲು ಅವಕಾಶ ಕಲ್ಪಿಸಲಾಗಿದೆ. ಇದಕ್ಕೆ ಯಾವುದೇ ಬಡ್ಡಿಯನ್ನು ವಿಧಿಸಲಾಗುವುದಿಲ್ಲ.
<table>
<tr><td>ಏಪ್ರಿಲ್ 2020 ತಿಂಗಳ ಕಂತು</td><td>ಜೂನ್ 2020 ತಿಂಗಳ ಕಂತಿನ ಜೊತೆ ಪಾವತಿಸತಕ್ಕದ್ದು.</td></tr>
<tr><td>ಮೇ 2020 ತಿಂಗಳ ಕಂತು</td><td>ಜುಲೈ 2020 ತಿಂಗಳ ಕಂತಿನ ಜೊತೆ ಪಾವತಿಸತಕ್ಕದ್ದು.</td></tr>
<tr><td>ಜೂನ್ 2020 ತಿಂಗಳ ಕಂತು</td><td>ಆಗಸ್ಟ್ 2020 ತಿಂಗಳ ಕಂತಿನ ಜೊತೆ ಪಾವತಿಸತಕ್ಕದ್ದು.</td></tr>
</table>
ಕೋವಿಡ್–19ರ 2ನೇ ಅಲೆಯ ನಂತರ ರಾಜ್ಯ ಸರ್ಕಾರದ ಇಂಧನ ಇಲಾಖೆಯು ದಿನಾಂಕ: 21.06.2021ರ ಆದೇಶದಂತೆ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ಏಪ್ರಿಲ್ ಮತ್ತು ಮೇ 2020 ತಿಂಗಳ ಬೇಡಿಕೆ ಶುಲ್ಕ ಮತ್ತು ಸ್ಥಿರ ಶುಲ್ಕವನ್ನು ಮನ್ನಾ ಮಾಡಿರುತ್ತದೆ. ಇದರಿಂದ 2,03,659 ಘಟಕಗಳಿಗೆ ರೂ.90.46ಕೋಟಿ ಮೊತ್ತದ ಸ್ಥಿರ ಶುಲ್ಕ ಪಾವತಿ ವಿನಾಯಿತಿ ಸೌಲಭ್ಯ ಲಭಿಸಿದೆ.</td>
<td>4. Karnataka State Small Industries Development Corporation has granted extension of time for payment of installments of plots/ sheds allotted to entrepreneurs, rent, and water tax for the month of April, May and June 2020. No interest will be charged for this.
<table>
<tr><td>April 2020 month instalment</td><td>To be paid along with June 2020 month installment</td></tr>
<tr><td>May 2020 month installment</td><td>To be paid along with July 2020 month installment</td></tr>
<tr><td>June 2020 month installment</td><td>To be paid along with August 2020 month installment</td></tr>
</table>
After COVID-19 second wave Energy Department vide notification dated 21/6/2021 has waived off fixed and demand charges of MSMEs for the month of May and June 2021. It has incurred provided Rs.90.46crores for 2,03,659 units of fixed fee payment exemption facility for 2021-22</td>
</tr>
<tr>
<td>ಆ)</td>
<td>ಮುಚ್ಚಿರುವ ಸಣ್ಣ ಕೈಗಾರಿಕೆಗಳಲ್ಲಿನ ಕಾರ್ಮಿಕರು ತರುವಾಯ ಯಾವ ಯಾವ ವೃತ್ತಿಯನ್ನು ಕೈಗೊಂಡಿದ್ದಾರೆ; ಇಂತಹ ಸಣ್ಣ ಕೈಗಾರಿಕೆಗಳಿಂದ ಹೊರಬಂದ ಕಾರ್ಮಿಕರ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗಳನ್ನು ಪರಿಶೀಲಿಸಲಾಗಿದೆಯೇ;</td>
<td>ಕೈಗಾರಿಕೆಗಳು ಮುಚ್ಚಿದ ತರುವಾಯ ಕಾರ್ಮಿಕರು ಯಾವ ವೃತ್ತಿ ಕೈಗೊಂಡಿರುತ್ತಾರೆಂಬ ಮಾಹಿತಿ ಲಭ್ಯವಿರುವುದಿಲ್ಲ.<br><br>ಉದ್ಯೋಗಾಂಕ್ಷಿಗಳಿಗೆ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯು ಸ್ವಯಂ–ಉದ್ಯೋಗ ಯೋಜನೆಯಾದ ಪ್ರಧಾನಮಂತ್ರಿಗಳ ಉದ್ಯೋಗ ಸೃಜನ ಯೋಜನೆಯನ್ನು ಜಾರಿಗೊಳಿಸುತ್ತಿದೆ. ಆದರೆ ಕಾರ್ಮಿಕರ ಆರ್ಥಿಕ ಮತ್ತು ಸಾಮಾಜಿಕ</td>
<td>Information pertaining to the occupation of the laborers after the closure of industrial units is not available.<br><br>Prime Minister's Employment Generation Programme (PMEGP) scheme is implemented by the Commerce and Industries Department for the un employed youth. But the</td>
</tr>
</table>

| | | | |
|---|---|---|---|
| | | ಸ್ಥಿತಿಗಳನ್ನು ಪರಿಶೀಲಿಸುವ ವಿಷಯವು ಇಲಾಖೆಯ ವ್ಯಾಪ್ತಿಗೆ ಬರುವುದಿಲ್ಲ. | matter pertaining to economic and social status of laborers is not within the ambit of Commerce and Industries. |
| ಇ) | ಪರಿಶೀಲಿಸಲಾಗಿದ್ದಲ್ಲಿ, ಸಮಾಜದಲ್ಲಿ ಕಾರ್ಮಿಕರ ಸ್ಥಿತಿ ಹೇಗಿದೆ; | ರಾಜ್ಯದ ಆರ್ಥಿಕತೆಗೆ ಜಿಡಿಪಿಯಲ್ಲಿ ಶೇ.21.3 ರಷ್ಟು ಕೊಡುಗೆ ನೀಡುತ್ತಿದ್ದ ಕೈಗಾರಿಕಾ ವಲಯವು 2020-21ರಲ್ಲಿ ಶೇ. 19.4ಕ್ಕೆ ಇಳಿದಿತ್ತು. ಅಂದರೆ, ಕೋವಿಡ್ ಲಾಕ್ ಡೌನ್ ಕಾಲದ ವರ್ಷದಲ್ಲಿ ಕೈಗಾರಿಕಾ ಉತ್ಪಾದನೆ ಕುಂಠಿತಗೊಂಡಿದ್ದು, ಕೆಲಕಾರ್ಮಿಕರು ಗ್ರಾಮೀಣ ಪ್ರದೇಶಗಳಿಗೆ ತೆರಳಿದ್ದರು. ಇದೀಗ ಮತ್ತೆ ಕೈಗಾರಿಕಾ ಬೆಳವಣಿಗೆ ಚುರುಕುಗೊಂಡಿದ್ದು, ಗ್ರಾಮೀಣ ಪ್ರದೇಶಗಳಿಂದ ವಾಪಸ್ ಕೈಗಾರಿಕಾ ಕೆಲಸಗಳಿಗೆ ಸೇರುತ್ತಿದ್ದಾರೆ. | The contribution of the industrial sector to the state's economy reduced from 21.03% to 19.4% in 2020-21, as a result of industrial laborers migrated to rural areas. As the surge in the industrial activities taking place, laborers are returning to work. |
| ಈ) | ಬಾಗಿಲು ಮುಚ್ಚಿರುವ ಸಣ್ಣ ಕೈಗಾರಿಕೆಗಳ ಕಾರ್ಮಿಕರ ಬಲವರ್ಧನೆಗೆ ಸರ್ಕಾರ ರೂಪಿಸಿರುವ ಕಾರ್ಯಕ್ರಮಗಳೇನು? | ಬಾಗಿಲು ಮುಚ್ಚಿರುವ ಸಣ್ಣ ಕೈಗಾರಿಕೆಗಳ ಕಾರ್ಮಿಕರ ಬಲವರ್ಧನೆಗೆ ಕಾರ್ಮಿಕ ಇಲಾಖೆಯಿಂದ ಯಾವುದೇ ಯೋಜನೆ ಜಾರಿಯಲ್ಲಿರುವುದಿಲ್ಲ. ಆದರೆ ಸಂಸ್ಥೆಯು ಮುಚ್ಚಲ್ಪಟ್ಟ ಸಂದರ್ಭದಲ್ಲಿ ಅರ್ಹ ಕಾರ್ಮಿಕರು ಕೆಲವು ಶಾಸನಾತ್ಮಕ ಸೌಲಭ್ಯಗಳನ್ನು ಪಡೆಯಲು ಅರ್ಹರಿರುತ್ತಾರೆ.<br><br>1. ಉಪಧನ ಪಾವತಿ ಕಾಯ್ದೆಯಡಿ ಕಾರ್ಮಿಕರು ಸಲ್ಲಿಸಿರುವ ಸೇವಾವಧಿ ಮತ್ತು ಅಂತಿಮ ವೇತನದ ಮೇಲೆ ಉಪಧನ ಪಡೆಯಲು ಅರ್ಹರಿರುತ್ತಾರೆ.<br>2. ಬಾಕಿ ವೇತನ<br>3. ಗಳಿಕೆ ರಜೆ ನಗದೀಕರಣ<br>4. ಬಾಕಿ ಬೋನಸ್<br>5. ಕೈಗಾರಿಕಾ ವಿವಾದ ಕಾಯ್ದೆಯಡಿ ಕಲಂ 25 (FFF) ರಡಿ closure compensation ಪರಿಹಾರ | There is no scheme with Labour Department under which relief is given to strengthen labour of closed units. But eligible labours will get some statutory benefits on closure of units.<br><br>1. Gratuity<br>2. Balance salary<br>3. Leave encashment<br>4. Balance bonus<br>5. Closure compensation under Industrial Disputes act Col 25 (FFF) |

ಸಿಐ 64 ಎಸ್‌ಎಸ್‌ಐ 2022

(ಎನ್.ನಾಗರಾಜು (ಎಂ.ಟಿ.ಬಿ))
ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ
ಸಾರ್ವಜನಿಕ ವಲಯ ಉದ್ಯಮಗಳ ಸಚಿವರು